# ಇಲಾಖೆಯ ಯೋಜನೆಗಳ ಟಿಪ್ಪಣಿ

1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದು ಪ್ರಮುಖವಾಗಿ ಸಾರ್ವಜನಿಕ ಆರೋಗ್ಯ ಹಾಗೂ ಸಮುದಾಯದ ಆರೋಗ್ಯ ಸೇವೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನೀಡುತ್ತಿದೆ. ಆರೋಗ್ಯಯುತ ಜೀವನ ನಡೆಸುವ ಬಗ್ಗೆ ಸಮುದಾಯಕ್ಕೆ ಶಿಕ್ಷಣ ನೀಡುವುದು, ಮಾರಕ ರೋಗಗಳನ್ನು ಬಾರದಂತೆ ಮುನ್ನೆಚ್ಚರಿಕೆಯಾಗಿ ಲಸಿಕೆ ನೀಡುವುದು, ಜನಸಂಖ್ಯಾ ನಿಯಂತ್ರಣದ ದಿಶೆಯಲ್ಲಿ ಕುಟುಂಬ ಕಲ್ಯಾಣ ಯೋಜನೆಯನ್ನು ಅನುಷ್ಟಾನಗೊಳಿಸುವುದು ಹಾಗೂ ಅಗತ್ಯ ಆರೋಗ್ಯ ಸೇವೆಗಳನ್ನು ನೀಡುವುದು ಮುಂತಾದ ಪ್ರಮುಖ ಕಾರ್ಯಕ್ರಮಗಳನ್ನು ಆರೋಗ್ಯ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

2) ಸಾರ್ವಜನಿಕ ಆರೋಗ್ಯಕ್ಕೆ ಪ್ರಾಮುಖ್ಯತೆ ನೀಡುವುದರೊಂದಿಗೆ ಇಲಾಖೆಯು ಈ ಕೆಳಕಂಡ ರಾಷ್ಟ್ರೀಯ ಹಾಗೂ ರಾಜ್ಯದ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

1) ಕನಿಷ್ಠ ಅವಶ್ಯಕತೆಗಳ ಯೋಜನೆಯಾದ ಗ್ರಾಮೀಣ ಆರೋಗ್ಯ ಯೋಜನೆ.

2) ಸಂತಾನೋತ್ಪತ್ತಿ ಹಾಗೂ ಮಕ್ಕಳ ಆರೋಗ್ಯ

3) ಕುಟುಂಬ ಕಲ್ಯಾಣ ಯೋಜನೆ

4) ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ

5) ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ

6) ರಾಷ್ಟ್ರೀಯ ಅಂಧತ್ವ ನಿರ್ಮೂಲನಾ ಕಾರ್ಯಕ್ರಮ

7) ರಾಷ್ಟ್ರೀಯ ಕಾಲರಾ ನಿಯಂತ್ರಣಾ ಕಾರ್ಯಕ್ರಮ

8) ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮ

9) ಆರೋಗ್ಯ ಶಿಕ್ಷಣ ಹಾಗೂ ತರಬೇತಿ

10) ರಾಷ್ಟ್ರೀಯ ಗಳಗಂಡ ನಿಯಂತ್ರಣ ಕಾರ್ಯಕ್ರಮ

11) ಲಸಿಕಾ ಕಾರ್ಯಕ್ರಮ

12) ಪೌಷ್ಟಿಕ ಆಹಾರ ಅನೀಮಿಯಾ ನಿಯಂತ್ರಣ

13) ARI

14) PFA ಇತ್ಯಾದಿ.

3) ಮೇಲ್ಕಂಡಂತೆ ರೋಗಗಳನ್ನು ನಿಯಂತ್ರಣ ಮಾಡುವ ಬಗ್ಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವುದೇ ಅಲ್ಲದೇ ಇಲಾಖೆಯು ಸಮುದಾಯದಲ್ಲಿ ವಿವಿಧ ಸೇವೆಗಳನ್ನು ನೀಡಿ ಅಭಿವೃದ್ಧಿ ಸೂಚ್ಯಂಕಗಳಾದ ಶಿಶುಮರಣ ಹಾಗೂ ತಾಯಿಯ ಮರಣಗಳನ್ನು ಕಡಿಮೆಗೊಳಿಸುವ ಬಗ್ಗೆ ಕ್ಷಿಪ್ರಗತಿಯಲ್ಲಿ ಜನಗಳನ್ನು ಮುಟ್ಟುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

4) ತಾಯಿಯ ಮರಣಗಳ ಬಹುತೇಕ ಪ್ರಕರಣಗಳಲ್ಲಿ ತರಬೇತಿ ಹೊಂದದೆ ಇರುವ ದಾಯಿಯರಿಂದ –ಅನಾರೋಗ್ಯಕರ ಪರಿಸರದಲ್ಲಿ ಹೆರಿಗೆಯಾದ ಪ್ರಕರಣಗಳಲ್ಲೇ ಮರಣ ಹೆಚ್ಚು ಸಂಭವಿಸುವುದನ್ನು ಮನಗಂಡು ಗ್ರಾಮೀಣ ಪ್ರದೇಶದಲ್ಲಿ ಎಲ್ಲ ಗರ್ಭಿಣಿಯರನ್ನು ನೊಂದಾಯಿಸಿಕೊಂಡು ಗರ್ಭಿಣಿಯರಿಗೆ ಪ್ರಸವ ಪೂರ್ವ ತಪಾಸಣೆ ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ.ಆರೋಗ್ಯ ಸಂಸ್ಥೆಗಳಲ್ಲೇ ಎಲ್ಲ ಹೆರಿಗೆಗಳನ್ನು ನಿರ್ವಹಿಸುವ ಬಗ್ಗೆ ಹೆಚ್ಚು ಒತ್ತನ್ನು ನೀಡಿ 1990–91 ರಲ್ಲಿದ್ದ 58.3 ಶೇಕಡಾ ಸಂಸ್ಥಾ ಹೆರಿಗೆ 2006–07 ರಲ್ಲಿ ಶೇ.78.8 ಸಂಸ್ಥೆಗಳಲ್ಲಿ ಹೆರಿಗೆ ನಿರ್ವಹಿಸುವಂತೆ ಕ್ರಮ ತೆಗೆದುಕೊಳ್ಳಲಾಗಿದೆ ಹಾಗು

ಬಾಣಂತಿ/ಗರ್ಭಿಣಿಯಲ್ಲಿ ರಕ್ತ ಹೀನತೆಯಿಂದ ಸಂಬಂದಿಸುವ ಮರಣಗಳಿಗೆ ಪ್ರತ್ಯೇಕವಾಗಿ ಕಬ್ಬಿಣಾಂಶದ ಮಾತ್ರೆಗಳನ್ನು ನೀಡುವ ಕಾರ್ಯಕ್ರಮವನ್ನು ಯಶ್ವಸಿಯಾಗಿ ಅನುಷ್ಠಾನಗೊಳಿಸಿ ತಾಯಿಯ ಮರಣದರವನ್ನು 90–91 ರಿಂದ 2006–07 ಪ್ರತಿ ಲಕ್ಷ ಜನನಕ್ಕೆ ಸುಮಾರು 224 ರಿಂದ 80 ಕ್ಕೆ ಇಳಿಸಲಾಗಿದೆ. ಗರ್ಭಿಣಿಯರಿಗೆ ಪ್ರಸವ ಪೂರ್ವ ಆರೈಕೆ ಹಾಗು ಬಾಣಂತಿ/ಮಕ್ಕಳ ನಿಗದಿತ ಆರೋಗ್ಯ ತಪಾಸಣೆ ನಿರ್ದೇಶನದ ಸೇವೆಯಿಂದ 1990–91 ರಲ್ಲಿ ಪ್ರತಿ ಸಾವಿರ ಜನನಕ್ಕೆ 53 ಶಿಶುಮರಣವಿದ್ದು, ಶಿಶುಮರಣದ ದರವನ್ನು ಪ್ರತಿ ಸಾವಿರಕ್ಕೆ 30ಕ್ಕೆ ಇಳಿಸಲಾಗಿದೆ.

## ದೇಶದ ಪ್ರಗತಿಗೆ

5) ದೇಶದ ಪ್ರಗತಿಗೆ ಜನಸಂಖ್ಯಾ ನಿಯಂತ್ರಣ ಒಂದು ಪ್ರಮುಖ ಅಂಶವಾಗಿದ್ದು ಕುಟುಂಬ ಯೋಜನಾ ಕಾರ್ಯಕ್ರಮವು ಒಂದು ಅತ್ಯಂತ ಅಗತ್ಯವಾದ ಕುಟುಂಬ ಯೋಜನಾ ಕಾರ್ಯಕ್ರಮವಾಗಿದ್ದು ಇಲಾಖೆಯು ಈ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.

6) ಪ್ರಸ್ತುತ ಈ ಕಾರ್ಯಕ್ರಮವು ಸಮುದಾಯ ಅಗತ್ಯಗಳ ಅಧಾರಿತ ಕಾರ್ಯಕ್ರಮವೆಂದು ಪರಿಗಣಿಸಿ ಜನರೇ ಸ್ವತಃ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಈ ಕಾರ್ಯಕ್ರಮದ ಯಶಸ್ವಿನ ಮೈಲಿಗಲ್ಲಾಗಿದೆ. ಸಮುದಾಯ ಶಿಕ್ಷಣ ಹಾಗೂ ತರಬೇತಿಯಲ್ಲಿ ಇಲಾಖೆಯು ಈ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರ ವಹಿಸಿದೆ.

7) ಕನಿಷ್ಠ ಅವಶ್ಯಕತೆಯ ಕಾರ್ಯಕ್ರಮದಡಿ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಎಲ್ಲರಿಗೂ ಆರೋಗ್ಯ ಸೇವೆಗಳನ್ನು ನೀಡಲು 3 ಹಂತಗಳಲ್ಲಿ – ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೆಂದ್ರಗಳನ್ನು ಸ್ಥಾಪಿಸಿ ಗ್ರಾಮೀಣ ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತಿದೆ.

8) ಮೈದಾನ ಪ್ರದೇಶದಲ್ಲಿ ಪ್ರತಿ 5000 ಜನಸಂಖ್ಯೆಗೆ ಒಂದು ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಪ್ರತಿ 3000 ಜನಸಂಖ್ಯೆಗೆ ಒಂದು ಉಪಕೇಂದ್ರವನ್ನು, ಪ್ರತಿ 20,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹಾಗೂ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಹಂತಹಂತವಾಗಿ ಕ್ರಮ ಕೈಗೊಳ್ಳಲಾಗಿದೆ.

9) ಆರೋಗ್ಯ ಅಭಿವೃದ್ದಿ ಕಾರ್ಯಕ್ರಮಗಳಿಗಾಗಿ 1990 –91 ರಲ್ಲಿ ಯೋಜನೆಯಲ್ಲಿ 235.19 ಲಕ್ಷ ರೂ ಗಳನ್ನು ಬಿಡುಗಡೆಗೊಳಿಸಿ 200,23 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಅನುದಾನವನ್ನು ಕಾಲಕಾಲಕ್ಕೆ ಹೆಚ್ಚಿಸಲಾಗಿದ್ದು 2005–06 ರಲ್ಲಿ 583.77 ಲಕ್ಷ ರೂ.ಗಳು ಬಿಡುಗಡೆಯಾಗಿ 532.17 ಲಕ್ಷ್ ರೂಗಳು ವೆಚ್ಚವಾಗಿರುತ್ತದೆ.

10) 2006–07 ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಿಗಾಗಿ ಇಲಾಖೆಗೆ ನಿಗದಿಯಾಗಿರುವ ಅನುದಾನ, ಬಿಡುಗಡೆ ಹಾಗೂ 15/2/07ರವರೆಗಿನ ವೆಚ್ಚದ ವಿವರಗಳನ್ನು ಈ ಕೂಡ ಲಗತ್ತಿಸಿದೆ.